
ರಾಚತೊಡಗಿತು. ಅಷ್ಟರಲ್ಲಿ ಸ್ವಲ್ಪ ಹತ್ತಿರದಲ್ಲಿಯೇ ಕಂಡ ದೊಡ್ಡ ಆಲದಮರದ ಆಶ್ರಯಕ್ಕೆ ಬೇಗ ಹೋಗೋಣವೆಂದು ಹಣ್ಣಿನ ಗಾಡಿಯನ್ನು ಸ್ವಲ್ಪ ವೇಗವಾಗಿ ತಳ್ಳುತ್ತಾ ಬರುತ್ತಿದ್ದ ಶ್ರೀಕಂಠನಿಗೆ, ರಸ್ತೆ ಬದಿಯಲ್ಲಿ ಬಿಬಿಎಂಪಿಯವರು ಮಾಮೂಲಿಯಂತೆ ಅಗೆದು ಹಾಗೇ ಬಿಟ್ಟಿದ್ದ ಗುಂಡಿಯು ಕಾಣಲಿಲ್ಲ. ಗುಂಡಿಯೊಳಗೆ ದೊಪ್ಪನೆ ಇಳಿದ ಚಕ್ರದಿಂದಾಗಿ ಗಾಡಿಯು ಸಮತೋಲನ ಕಳೆದುಕೊಂಡು ಒಂದು ಕಡೆ ಜಾರಿತು. “ಹೇ... ಹೇ... ಥೂ...” ಎನ್ನುತ್ತಾ ಶ್ರೀಕಂಠನು ಗಾಡಿಯನ್ನು ಬ್ಯಾಲೆನ್ಸ್ ಮಾಡಲು ಎಷ್ಟೇ ಪ್ರಯತ್ನಪಟ್ಟರೂ ಆಗದೆ, ವಾಲಿದ್ದ ಗಾಡಿಯಿಂದ ನೀಟಾಗಿ ಒಂದರ ಮೇಲೊಂದರಂತೆ ಜೋಡಿಸಿಟ್ಟಿದ್ದ ಹಣ್ಣುಗಳು ನೆಲಕ್ಕೆ ಉರುಳಿ ಬಿದ್ದವು.



ಗಾಡಿಯನ್ನು ಸರಿಯಾಗಿ ಎತ್ತಿ ನಿಲ್ಲಿಸಿ, ಬಿದ್ದಿದ್ದ ಹಣ್ಣುಗಳನ್ನು ಹೆಕ್ಕತೊಡಗಿದ. ಸ್ವಲ್ಪ ಹಣ್ಣುಗಳು ಮಣ್ಣಿನಲ್ಲಿ ಬಿದ್ದಿದ್ದರೆ, ಮತ್ತಷ್ಟು ಹಣ್ಣುಗಳು ರಸ್ತೆಯ ಮಧ್ಯಕ್ಕೆ ಉರುಳಿಕೊಂಡು ಹೋಗಿದ್ದವು. ಇವನಿದ್ದ ಏರಿಯಾ ಬೆಂಗಳೂರಿನ ಹೊರವಲಯದ ಉಪನಗರವಾಗಿದ್ದು, ಮಳೆ ಶುರುವಾಗಿದ್ದರಿಂದಲೋ ಅಥವಾ ಭಾನುವಾರವಾಗಿದ್ದರಿಂದಲೋ ವಾಹನ ಸಂಚಾರ ವಿರಳವಾಗಿತ್ತು. ರಸ್ತೆ ಮಧ್ಯೆ ಬಿದ್ದಿದ್ದ ಹಣ್ಣುಗಳನ್ನು ಶ್ರೀಕಂಠನು ಆಯ್ದುಕೊಳ್ಳುತ್ತಿದ್ದಾಗಲೇ ವೇಗವಾಗಿ ಅದೇ ರಸ್ತೆಯಲ್ಲಿ ಬರುತ್ತಿದ್ದ ಕಾರೊಂದು ಜೋರಾಗಿ ಹಾರ್ನ್ ಮಾಡುತ್ತಾ, ಗಕ್ಕನೆ ಬ್ರೇಕ್ ಹಾಕಿ ನಿಂತಿತು. ಶ್ರೀಕಂಠನು ವೇಗವಾಗಿ ಪಕ್ಕಕ್ಕೆ ಸರಿದನಾದರೂ, ಅಷ್ಟರಲ್ಲಾಗಲೇ ಬೀಪಿ ಏರಿಸಿಕೊಂಡಿದ್ದ ಕಾರಿನ ಡ್ರೈವರ್ ತಲೆಯನ್ನು ಕಿಟಕಿಯಿಂದ ಹೊರಹಾಕಿ, “ಎಲ್ಲಿಂದ ಬರ್ತಿರೋ? ಸಾಯೋದಕ್ಕೆ ನನ್ನ ಗಾಡಿನೇ ಬೇಕಿತ್ತಾ? ದರಿದ್ರ ನನ್ಮಕ್ಕಳಾ, ಥೂ” ಎಂದು ಬಯ್ದು, ವೇಗವಾಗಿ ಹೊರಟುಹೋದ. ಕ್ಷಣಾರ್ಧದಲ್ಲಿ ನಡೆದ ಘಟನೆ ಮತ್ತು ಬೈಗುಳಗಳಿಂದ ಕುಗ್ಗಿಹೋದ ಶ್ರೀಕಂಠನು ಕಣ್ಣಲ್ಲಿ ನೀರು ತುಂಬಿಕೊಂಡು, ಮೌನವಾಗಿ ತಲೆ ಬಗ್ಗಿಸಿಕೊಂಡು ಬಿದ್ದ ಹಣ್ಣುಗಳನ್ನು ಹೆಕ್ಕುವ ಕಾರ್ಯ ಮುಂದುವರೆಸಿದ. ಬಿದ್ದ ಹಣ್ಣುಗಳನ್ನೆಲ್ಲಾ ಬೇಗ ಬೇಗ ಆರಿಸಿಕೊಂಡು, ಮಣ್ಣಾಗಿದ್ದ ಅವನ್ನೆಲ್ಲಾ ತನ್ನ ಅಂಗಿಯಿಂದ ಬೇಗ ಬೇಗ ಒರೆಸುತ್ತಾ ಗಾಡಿಗೆ ತುಂಬಿದ. ನಂತರ ತನ್ನ ಗಾಡಿಯನ್ನು ತಳ್ಳುತ್ತಾ, ಆಲದ ಮರದ ಕೆಳಗೆ ಬಂದು ನಿಂತ. ಪಟಪಟ ಜೋರಾಗಿ ಬಿದ್ದ ಮಳೆ ಕೆಲವೇ ನಿಮಿಷಗಳಲ್ಲಿ ನಿಂತು, ಈಗ ಸಣ್ಣದಾಗಿ ಹನಿಯುತ್ತಿತ್ತು. ಈ ಹಣ್ಣುಗಳಲ್ಲಿ ಎಷ್ಟು ಹಣ್ಣುಗಳು ಮತ್ತೆ ಮಾರಾಟವಾಗುವ ಅರ್ಹತೆ ಉಳಿಸಿಕೊಂಡಿವೆ? ಮಣ್ಣಲ್ಲಿ ಬಿದ್ದು, ಒಡೆದು ಹಾಳಾದ ಎಷ್ಟು ಹಣ್ಣುಗಳು ಪಕ್ಕದ ಮನೆಯ ಹಸುವಿನ ಹೊಟ್ಟೆಗೆ ಹೋಗುತ್ತವೆ? ಎಂದು ಅಂದಾಜು ಮಾಡತೊಡಗಿದ. ಅಷ್ಟರಲ್ಲಿ ಏನೋ ನೆನಪಾದಂತೆ “ಅಯ್ಯೋ! ಗಲ್ಲಾಪೆಟ್ಟಿಗೆ ಎಲ್ಲಿಯೂ ಕಾಣುತ್ತಿಲ್ಲವಲ್ಲಾ?” ಎಂದು ಅಲ್ಲಿಯೇ ಸುತ್ತಮುತ್ತ ಹುಡುಕತೊಡಗಿದ. ಆದರೆ, ಅದು ಅಲ್ಲೆಲ್ಲೂ ಕಾಣಲಿಲ್ಲ. ಬಹುಶಃ ಗಾಡಿ ಪಲ್ಟಿ ಹೊಡೆದಾಗ ಗಲ್ಲಾಪೆಟ್ಟಿಗೆ ಅಲ್ಲೇ ಬಿದ್ದಿರಬೇಕು ಎಂದು ಎಣಿಸಿ, ಅಲ್ಲಿಗೆ ಬಂದು ಹುಡುಕತೊಡಗಿದ. ಅಂದು ಚೆನ್ನಾಗಿ ವ್ಯಾಪಾರವಾಗಿದ್ದ ಖುಷಿಯೆಲ್ಲಾ ಜರ್ರನೆ ಇಳಿದಿತ್ತು. ಅದೃಷ್ಟವಶಾತ್ ಗಲ್ಲಾಪೆಟ್ಟಿಗೆಯು ಹಣ್ಣುಗಳು ಬಿದ್ದ ಜಾಗದಲ್ಲಿಯೇ ಇತ್ತು. ಆ ಪುಟ್ಟ ಪೆಟ್ಟಿಗೆಯ ಮುಚ್ಚಳ ಬಿದ್ದ ರಭಸಕ್ಕೆ ತೆರೆದಿತ್ತು. ಕೆಲವು ನೋಟುಗಳು ಮತ್ತು ಚಿಲ್ಲರೆ ನೆಲಕ್ಕೆ ಬಿದ್ದಿದ್ದವು. ಮಳೆ ಮತ್ತು ಮಣ್ಣಿನಲ್ಲಿ ನೋಟುಗಳು ನೆಂದಿದ್ದವು. ನೋಟುಗಳನ್ನು ಒಂದೊಂದಾಗಿ ಒರೆಸುತ್ತಾ ಗಲ್ಲಾಪೆಟ್ಟಿಗೆಯೊಳಗೆ ತುಂಬಿಕೊಂಡು ಮತ್ತೆ ಮರದ ಕೆಳಗೆ ಓಡಿದ.

ಮಳೆಯಲ್ಲಿ ನೆಂದಿದ್ದನಾದರೂ ಶ್ರೀಕಂಠನಿಗೆ ತಲೆ, ಮೈ ಒರೆಸಿಕೊಳ್ಳಬೇಕು ಎಂದೇನೂ ಅನಿಸಿರಲಿಲ್ಲ. ತಲೆಯ ತುಂಬಾ ಮಳೆಯು ಹೇಗೆಲ್ಲಾ ತನ್ನ ಜೀವನದಲ್ಲಿ ಆಟವಾಡಿತು ಎಂಬ ಆಲೋಚನೆಗಳೇ ತುಂಬಿದ್ದವು. ಮಳೆಗೇಕೆ ನನ್ನ ಮೇಲೆ ಇಷ್ಟೊಂದು ವೈರತ್ವ? ಹಳ್ಳಿಯಲ್ಲಿ ತಾನು ಬೇಸಾಯ ಮಾಡಿದಾಗ ಬಾರದ ಮಳೆ ತನ್ನ ಜೀವನವನ್ನೇ ನಾಶ ಮಾಡಿತು. ಇಲ್ಲಿ ಬೇಡವೆಂದರೂ ಬಂದು ತನ್ನ ಬದುಕಿಗೆ ಕೊಳ್ಳಿ ಇಡಲು ನೋಡುತ್ತಿದೆ. ಬದುಕು ಕಟ್ಟಿಕೊಳ್ಳೋಣವೆಂದು ಹಳ್ಳಿ ಬಿಟ್ಟು ಪಟ್ಟಣ ಸೇರಿದರೆ ಇಲ್ಲಿಯೂ ಮಳೆ ನನ್ನನ್ನು ನೆಮ್ಮದಿಯಾಗಿ